# ನಾಗರಿಕರೆ, ದೇಶೋದ್ಧಾರ ಮತ್ತು ನಮ್ಮ ರಕ್ಷಣೆ ಮಾಡುವವರಿಗೇ ತಮ್ಮ ಮತವನ್ನು ನೀಡಿರಿ





## ಸಂಪಾದಕೀಯ

**ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥ 4.7 ॥**
**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ 4.8 ॥**

**ಯಾವಾಗ ಯಾವಾಗ ಧರ್ಮಕ್ಕೆ ಗ್ಲಾನಿ ಬರುತ್ತದೆಯೋ ಮತ್ತು ಅಧರ್ಮಕ್ಕೆ ಬಲ ಸಿಗುತ್ತದೆಯೋ ಆಗ ನಾನು ಜನ್ಮತಾಳುತ್ತೇನೆ. ಸಾಧಕರ ರಕ್ಷಣೆಗಾಗಿ, ದುರ್ಜನರ ನಾಶಕ್ಕಾಗಿ ಮತ್ತು ಧರ್ಮಸಂಸ್ಥಾಪನೆಗಾಗಿ ನಾನು ಪ್ರತಿಯೊಂದು ಯುಗದಲ್ಲಿಯೂ ಮತ್ತೆ ಮತ್ತೆ ಅವತಾರ ತಾಳುತ್ತೇನೆ.**

## ನಮಗೀಗ ಸುಳ್ಳು ಆಶ್ವಾಸನೆಗಳು ಬೇಕಿಲ್ಲ !

**ಅತಿವೃಷ್ಟಿ ಅನಾವೃಷ್ಟಿಃ ಮೂಷಕಾಃ ಶಲಭಾಃ ಶುಕಾಃ ।**
**ಸ್ವಚಂಕ್ರಂ ಪರಚಕ್ರಂ ಚ ಸಪ್ತೈತೇ ಇತಯಃ ಸ್ಮೃತಾ: ॥**

**ಅರ್ಥ :** ದೇಶದಲ್ಲಿ ಅರಾಜಕತೆ ತಾಂಡವವಾಡುತ್ತಿರುವಾಗ ದೇಶದ ಮೇಲೆ ಸಂಕಟಗಳು ಎರಗುತ್ತವೆ. ಯಾವ ರಾಜ್ಯದಲ್ಲಿ ರಾಜನು ಧರ್ಮಪಾಲನೆ ಮಾಡುವುದಿಲ್ಲವೋ ಅಲ್ಲಿ ಪ್ರಜೆಗಳೂ ಧರ್ಮಪಾಲನೆ ಮಾಡುವುದಿಲ್ಲ. ಆಗ ರಾಷ್ಟ್ರದಲ್ಲಿ ಅರಾಜಕತೆ ತಾಂಡವವಾಡುತ್ತದೆ.

ಈಗ ನಮ್ಮ ದೇಶದ ಸ್ಥಿತಿಯನ್ನು ಗಮನಿಸಿದರೆ ಈ ಮೇಲಿನ ಶ್ಲೋಕದ ಸಚಿತ್ರ ಚಿತ್ರಣ ಕಾಣಸಿಗುತ್ತದೆ. ಇಂದು ದೇಶವು ಭಯೋತ್ಪಾದನೆ, ನಿರುದ್ಯೋಗ, ಅನಕ್ಷರತೆ, ಬಡತನ... ಹೀಗೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಈಗ ಈ ಸಮಸ್ಯೆಗಳ ಪಟ್ಟಿಗೆ ಹೊಸತೊಂದು ಸಮಸ್ಯೆ ಸೇರಿಕೊಂಡಿದೆ, ಅದೇನೆಂದರೆ (ಅ)ರಾಜಕೀಯ ಸಮಸ್ಯೆ.

ಪಠ್ಯಪುಸ್ತಕಗಳು ಮುದ್ರಣವಾಗುವಾಗ ರಾಜ್ಯದ ಮುಖ್ಯಮಂತ್ರಿ ಯಾರು ? ದೇಶದ ಪ್ರಧಾನಮಂತ್ರಿ ಯಾರು ? ಎಂಬುದನ್ನು ಸಮಾಜ ಶಾಸ್ತ್ರದ ಪುಸ್ತಕದಲ್ಲಿ ಮುದ್ರಿಸಲಾಗುತ್ತದೆ. ಆದರೆ ಆ ಹೆಸರುಗಳು ಸತತ ಬದಲಾಗುತ್ತಿರುತ್ತವೆ. ಒಂದು ಪಕ್ಷ ಶಿಕ್ಷಕರು ಶಾಲೆಯಲ್ಲಿ ಪಾಠ ಕಲಿಸುವಾಗ ಆ ಹೆಸರುಗಳು ಬದಲಾದರೆ ಅದರಲ್ಲಿ ತಿದ್ದುಪಡಿ ಮಾಡಬಹುದು. ಆದರೆ ಅದೇ ಪರೀಕ್ಷೆಯ ಹಿಂದಿನ ದಿನ ವರ್ತಮಾನಪತ್ರಿಕೆಯಲ್ಲಿ 'ಸರಕಾರ ಧರೆಗುರುಳಿತು' ಎಂದೇನಾದರೂ ಪ್ರಕಟವಾದರೆ ಮುಗಿಯಿತು. ಆ ಮಕ್ಕಳಿಗೆ, ಅದನ್ನು ತಪಾಸಣೆ ಮಾಡುವವರಿಗೆ ಅದಕ್ಕಿಂತ ದೊಡ್ಡ ಸಮಸ್ಯೆ ಬೇರೊಂದು ಇರಲಿಕ್ಕಿಲ್ಲ. ಭಯೋತ್ಪಾದಕರು ಬಾಂಬ್‌ಬಲದಿಂದ ದೇಶವನ್ನು ಆಳುತ್ತಿದ್ದರೆ ನಮ್ಮ(?) ರಾಜಕಾರಣಿಗಳು ತಮ್ಮ ಆಶ್ವಾಸನೆಯ ಬಲದಿಂದ ದೇಶವನ್ನು ತಮ್ಮ ವಶದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಚುನಾವಣೆಯ ಸಮಯದಲ್ಲಿ 'ನಾವು ಉದ್ಯೋಗ ಕೊಡಿಸುತ್ತೇವೆ, ಬಡತನ-ಶಿಕ್ಷಣ ಹೀಗೆ ಮುಂತಾದ ಸಮಸ್ಯೆಗಳನ್ನು ನಿವಾರಿಸುತ್ತೇವೆ ಎಂದು ಹೇಳುತ್ತಾ ತಮ್ಮ ಆಶ್ವಾಸನೆಗಳ (ಅವ) ಕೃಪೆಯನ್ನು ಧಾರಾಳವಾಗಿ ಹರಿಸುತ್ತಾ, ನಾವೇ ನಿಮ್ಮ ತಂದೆ-ತಾಯಿ, ಬಂಧು-ಬಳಗ, ನಾವೇ ನಿಮ್ಮ ಕಷ್ಟಗಳಿಗೆ ಸ್ಪಂದಿಸುವವರು ಎಂಬಂತಹ ಚಿತ್ರಣವನ್ನು ಮೂಡಿಸುವ ರಾಜಕೀಯ ಪಕ್ಷಗಳು ಈ ದೇಶದ ನಾಗರಿಕರಿಗೆ ಏನು ಬೇಕು ಎಂಬುದನ್ನೇ ಮರೆತಿವೆ. ಅಧಿಕಾರ ಪಡೆಯುವ ಹಣಾಹಣಿಯ ಈ ಕಾಳಗದಲ್ಲಿ ಜನತೆಗೆ ಏನು ಬೇಕಾಗಿದೆಯೋ ಅದರ ಬಗ್ಗೆ ಚಿಂತನೆ ನಡೆಸದೇ ಪರಂಪರಾಗತವಾಗಿ ಬಂದಿರುವ 'ಅಜೆಂಡಾ'ಗಳನ್ನು ಮರುಮುದ್ರಣ ಮಾಡುತ್ತಿರುತ್ತಾರೆ. ವ್ಯತ್ಯಾಸವಿಷ್ಟೇ ಅದರಲ್ಲಿನ ದಿನಾಂಕ ಮಾತ್ರ ಬದಲಾಗುತ್ತದೆ, ಮಾಹಿತಿ ಹೆಚ್ಚು ಕಡಿಮೆ ಒಂದೇ ರೀತಿಯದ್ದಾಗಿರುತ್ತದೆ. ಈ ರೀತಿ ಪ್ರತಿ ಬಾರಿ ಆಶ್ವಾಸನೆಗಳ ಮೇಲೆ ನಮ್ಮನ್ನು ಆಳುತ್ತಿರುವ ಈ ನೇತಾರರು ನಾನು ಇಂತಹದೊಂದು ಪಕ್ಷದವ, ನಾನಿರುವ ಪಕ್ಷವು ದೇಶಕ್ಕಾಗಿ ಏನೇನು ಕಾರ್ಯ ಮಾಡಿದೆ ಎಂಬಂತಹ ಪೊಳ್ಳುವಾದದಲ್ಲಿ ಸಿಲುಕಿಸಿ, ನಾನು ಈ ದೇಶದ ನಾಗರಿಕ, ಈ ರಾಜ್ಯದವನು, ನಾನು ಇಲ್ಲಿಯ ನಾಗರಿಕರ ಸೇವಕನಾಗಿದ್ದೇನೆ, ದೇಶದ-ರಾಜ್ಯದ ಹಿತವೇ ತನ್ನ ಮೂಲ ಉದ್ದೇಶವಾಗಿದೆ ಎಂಬುದು ಅವರ 'ಅಜೆಂಡಾ'ದ ಮುಖಪುಟದಲ್ಲೋ ಅಥವಾ ಜಾಹೀರಾತಿನಲ್ಲಿಯೋ ಕಾಣಲು ಸಿಗುತ್ತದೆ. ಚುನಾವಣೆ ಎದುರಾದರೆ ತಾವೇ ಸ್ವತಃ ಸಕ್ರಿಯವಾಗಿ ಶಾಲೆಯಲ್ಲಿ ಮಕ್ಕಳು ಬಾಯಿಪಾಠ ಹೊಡೆಯುವಂತೆ, ತಮ್ಮ ಕಳೆದ ಸಲದ ಅಜೆಂಡಾದ ಪುಟಗಳಲ್ಲಿನ ಸಾಲುಗಳನ್ನು ರಸ್ತೆಯ ಗೋಡೆ, ದೂರಚಿತ್ರವಾಹಿನಿ, ಘೋಷಣ ಬಾಝುಗಳ ಮೂಲಕ ಸಾರಿಸಾರಿ ಹೇಳುವ ನೇತಾರರು ಚುನಾವಣೆಯಾದ ಮಾರನೇ ದಿನ ಕಾಣಿಸುವುದು ದೂರಚಿತ್ರವಾಹಿನಿಯ ಪರದೆಯ ಮೇಲೆ. ಅದೂ ನಮ್ಮ-ನಿಮ್ಮ ಊರಿನಲ್ಲಿ ಅಲ್ಲ ಬೆಂಗಳೂರು-ದೆಹಲಿಯಂತಹ ದೊಡ್ಡ ದೊಡ್ಡ ನಗರಗಳಲ್ಲಿ. ಆಗ ಕಣ್ಣುಬಿಟ್ಟು ನೋಡುತ್ತಾ ಕುಳಿತಿರುವ ಜನತೆಗೆ ನಾವು ಚುನಾಯಿಸಿದ ಅಭ್ಯರ್ಥಿಯು ಎಷ್ಟರ ಮಟ್ಟಿಗೆ ಯೋಗ್ಯನಿದ್ದಾನೆ ಎಂಬುದರ ಸ್ಪಷ್ಟ ಕಲ್ಪನೆ ಮೂಡುತ್ತದೆ. ಚುನಾವಣೆಯ ಮೊದಲು ಇತರ ಪಕ್ಷಗಳನ್ನು ಟೀಕಿಸುವುದರಲ್ಲಿ ಧನ್ಯತೆಯನ್ನು ಪಡೆಯುತ್ತಿದ್ದ ನೇತಾರರು ಅದೇ ಪಕ್ಷದೊಂದಿಗೆ ಒಂದೇ ಟೇಬಲಿನಲ್ಲಿ ಕುಳಿತು ಪಾನೀಯ ಸೇವಿಸುವಾಗ ನಮ್ಮ ಆಸೆ-ಆಕಾಂಕ್ಷೆಗಳು ನೀರುಪಾಲು ಎಂಬುದು ಪುನಃ ಸಾಬೀತಾಗುತ್ತದೆ. ಮೊದಲು ಊರೂರಿಗೆ ಹೋಗಿ ಜನರಿಗೆ ಆಶ್ವಾಸನೆ ನೀಡುತ್ತಾ ತಮ್ಮನ್ನು ತಾವು ವ್ಯಸ್ತರನ್ನಾಗಿಸುತ್ತಿದ್ದ ನೇತಾರರು ಚುನಾವಣೆಯ ನಂತರ ರಾಜ್ಯದಿಂದ ದೆಹಲಿಯವರೆಗೂ ಅಲೆದಾಡಿ 'ಯಾವ ಪಕ್ಷದ 'ಹೈಕಮಾಂಡ್'ರೊಂದಿಗೆ ಚರ್ಚಿಸಿದರೆ ತಾವು ಲಾಭದ ಪಕ್ಷದಲ್ಲಿರಬಹುದು' ಎಂಬ ಶೋಧನೆಯಲ್ಲಿ ವ್ಯಸ್ತರಿರುತ್ತಾರೆ. ಇವೆಲ್ಲ ಯಾವುದೋ ಚಲನಚಿತ್ರದ ದೃಶ್ಯಗಳಲ್ಲ. ನಮ್ಮ ಈ ದೇಶದ ನಿಜಸಂಗತಿಯಾಗಿವೆ.

### ನಮಗೇನು ಬೇಕೋ ಅದನ್ನೇ ಕೊಡಿರಿ !

ನಮಗೆ ನಿಮ್ಮ ಆಶ್ವಾಸನೆಗಳು, ಮೊಸಳೆ ಕಣ್ಣೀರು, ಸಾಂತ್ವನ ಎಂಬುದೇನೂ ಬೇಡ. ನಿಮಗೆ ನಿಜವಾಗಿಯೂ ಏನಾದರು ಕೊಡುವುದೇ ಇದ್ದಲ್ಲಿ ನಮಗೆ ಈ ದೇಶದಲ್ಲಿ ನೆಮ್ಮದಿಯ ಬದುಕು, ಸುರಕ್ಷೆ, ಸ್ವಾತಂತ್ರ್ಯ, ಸಮಾನತೆಯನ್ನೇ ಕೊಡಿ. ಸ್ವಾತಂತ್ರ್ಯ ಬಂದಾಗಿನಿಂದ ಇಂದಿನವರೆಗೆ ಕೇವಲ ಆಶ್ವಾಸನೆಗಳ ಮೇಲೆಯೇ ನಮ್ಮನ್ನು ಪೋಷಿಸಿದ್ದೀರಿ. ನಿಮ್ಮ ಆಶ್ವಾಸನೆಗಳ ಆಧಾರಿತ ಜೀವನ ಪದ್ಧತಿ ನಮಗೆ ಬೇಡ. ಸ್ವಾತಂತ್ರ್ಯ ಬಂದಾಗಿನಿಂದ ನೀವು ಕಲಿಸಿದ ಶಿಕ್ಷಣವನ್ನು ಬಾಯಿಪಾಠ ಮಾಡಿ ಮಾಡಿ, ಅಕ್ಬರನು ದಯಾಮಯಿಯಾಗಿದ್ದನು, ಸರ್ವ ಧರ್ಮಸಮಭಾವಿಯಾಗಿದ್ದನು, ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲಕ್ಕಿಂತ ಹೆಚ್ಚು ಶ್ರಮಪಟ್ಟವನೆಂದು (ಅಹಿಂಸೆ ಎಂಬ ಹೆಸರಿನಡಿ ಮುಸಲ್ಮಾನರಿಗೆ ಶರಣಾಗುವ ವೃತ್ತಿಯಿಂದ) ಗಾಂಧಿಯನ್ನು ಆದರ್ಶ ವ್ಯಕ್ತಿಯನ್ನಾಗಿ ತೋರಿಸುವ, ಗಾಂಧಿಯ ಬಗ್ಗೆ ದೊಡ್ಡದೊಡ್ಡ ಪಾಠವನ್ನಿರಿಸಿ ವೈಭವೀಕರಿಸಿ, ಆದರೆ ಅದೇ ರಾಷ್ಟ್ರಕ್ಕಾಗಿ ನಗುನಗುತ್ತಾ ಜೀವವನ್ನು ಬಲಿದಾನ ಮಾಡಿದ ಹುತಾತ್ಮ ನಿಜವಾದ ರಾಷ್ಟ್ರಭಕ್ತರಾದ ಭಗತ್‌ಸಿಂಗ್‌ರಂತಹವರನ್ನು ಭಯೋತ್ಪಾದಕ ಎನ್ನುವ ಇತಿಹಾಸ ನಮಗೆ ಬೇಡ. ಈ ರೀತಿ ನಿಧಾನವಾಗಿ ಅಜ್ಞಾನದೆಡೆ ಕೊಂಡೊಯ್ಯುವ ನಿಮ್ಮ ಶಿಕ್ಷಣವಾಗಲಿ, ಜೀವನ ಪದ್ಧತಿಯಾಗಲಿ ನಮಗೆ ಬೇಡ. ಏಕೆಂದರೆ ನಮ್ಮ ಇತಿಹಾಸ ಶ್ರೀರಾಮಚಂದ್ರ, ಛತ್ರಪತಿ ಶಿವಾಜಿ ಮಹಾರಾಜ, ಶ್ರೀಕೃಷ್ಣದೇವರಾಯರಂತಹವರ ದೇವಮಾನವರ, ಮಹಾಪುರುಷರ ಆದರ್ಶದಿಂದ ಕೂಡಿದೆ. ಇದನ್ನು ನಾವು ನಮ್ಮ ಹಿರಿಯರಿಂದ ಕಲಿತಿದ್ದೇವೆ. ಅವರ ಆದರ್ಶದಿಂದಲೇ ಆಗಿನ ಜನರು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಿದ್ದರು. ಆದುದರಿಂದ 'ನಾವು ನಿಮಗೆ ಇದನ್ನು ಕೊಡುತ್ತಿದ್ದೇವೆ' ಎಂಬಂತಹ ಆಶ್ವಾಸನೆ ನೀಡುವವರೇ ನಮಗೆ ನಿಮ್ಮ ಪಕ್ಷದ, ನಿಮ್ಮ ನೇತಾರರ ಇತಿಹಾಸದ ಬಗ್ಗೆಯೂ ಪ್ರತ್ಯಕ್ಷ ಅನುಭವವಿದೆ. ಮೈತ್ರಿ ಎಂದು ಸಮ್ಮಿಶ್ರ ಸರಕಾರ ನಡೆಸುವಾಗ ಅಧಿಕಾರದಾಹದಿಂದ ಮೆರೆಯುವ ನೇತಾರರು ಒಂದು ಸಲ 'ಮೈತ್ರಿಯನ್ನು ಹಿಂದಕ್ಕೆ ಪಡೆಯುತ್ತೇವೆ' ಎಂದು ಹೇಳಿದರೆ ಸಾಕು ನಮ್ಮ ಕೋಟಿಗಟ್ಟಲೆ ಮತಗಳು ಮಣ್ಣುಪಾಲಾಗುತ್ತವೆ. ಇದು ಪರೋಕ್ಷವಾಗಿ ಜನತೆಗಾದ ಅಪಮಾನವೇ ಆಗಿದೆ. ನನ್ನ ಜೀವನ ಸುಧಾರಿಸಬಹುದು, ನನ್ನ ಜೀವನ ಮಟ್ಟ ಹೆಚ್ಚಾಗಬಹುದು ಎಂಬಂತಹ ಆಶಯದಿಂದ ಹಾಕಿದ ಮತವು ಕ್ಷಣಾರ್ಧದಲ್ಲಿ ನುಚ್ಚು ನೂರಾಗುತ್ತದೆ. ಆದುದರಿಂದ ಬಾಂಧವರೇ, ಈ ಬಾರಿಯ ಚುನಾವಣೆಯಲ್ಲಿ ಹಲವು ಸಲ ವಿಚಾರ ಮಾಡಿ ಯಾರು ದೇಶದ ನಿಜವಾದ ಹಿತವನ್ನು ಬಯಸುತ್ತಾರೋ, ಯಾರಿಗೆ ಮತವನ್ನು ನೀಡಿದರೆ ನಮ್ಮ ರಕ್ಷಣೆಯಾಗಿ ದೇಶದ ಉದ್ಧಾರವಾಗುತ್ತದೆಯೋ ಅದರ ಬಗ್ಗೆ ಚಿಂತನೆ ನಡೆಸಿ ಅನಂತರವೇ ಮತ ಚಲಾಯಿಸಿರಿ. ಇಲ್ಲದಿದ್ದರೆ ಪುನಃ ಜನತೆಯ ಆಸೆ-ಆಕಾಂಕ್ಷೆಗಳ ಮತ್ತು ನೇತಾರರ ಆಶ್ವಾಸನೆಗಳ ನಡುವೆ, ನಿಲ್ಲದು ಈ ಕಾಳಗ !

## ಹಿಂದೂ ಜನಜಾಗೃತಿ ಸಮಿತಿಯ ಯಶಸ್ಸು ...

### ಹಿಂದೂದ್ವೇಷಿ ಚಿತ್ರಕಾರ ಮ.ಫಿ. ಹುಸೇನರಿಗೆ ದುಬೈಗೆ ಹೋಗಿ ಪ್ರಶಸ್ತಿ ನೀಡುವ ಧರ್ಮದ್ರೋಹಿಗಳ ಸಂಚು ವಿಫಲ !

ರಾಜಸ್ಥಾನದ ಭೋರುಖಾ ಚಾರಿಟೇಬಲ್ ಟ್ರಸ್ಟಿನ ವತಿಯಿಂದ 'ಕಲೆ' ಎಂಬ ವಿಷಯದ ಮೇಲೆ ಮೂರು ದಿನಗಳ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಅದರಲ್ಲಿ ದುಬೈಗೆ ಹೋಗಿ ಮ.ಫಿ. ಹುಸೇನರಿಗೆ ಜೀವನಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಬೇಕೆಂದು ನಿರ್ಧರಿಸಲಾಗಿತ್ತು. ಹಿಂದೂ ಜನಜಾಗೃತಿ ಸಮಿತಿಯ ವಿರೋಧದಿಂದಾಗಿ ಈ ಕಾರ್ಯಕ್ರಮವನ್ನು ರದ್ದುಪಡಿಸಿರುವುದಾಗಿ ಟ್ರಸ್ಟ್‌ನ ಕಾರ್ಯಕಾರೀ ಸಂಚಾಲಕ ಶ್ರೀ. ಅಮಿತರಾವ ಬ್ಯಾನರ್ಜಿಯವರು ತಿಳಿಸಿದ್ದಾರೆ. ಭೋರುಖಾ ಚಾರಿಟೇಬಲ್ ಟ್ರಸ್ಟಿನ ವತಿಯಿಂದ ಚಿತ್ರಕಾರ ಮ.ಫಿ. ಹುಸೇನರಿಗೆ ಜೀವನಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸುವ ವಾರ್ತೆಯು ಮೊಟ್ಟಮೊದಲು 'ಖಲೀದ ಟೈಮ್ಸ್' ಎಂಬ ವರ್ತಮಾನಪತ್ರಿಕೆಯಲ್ಲಿ 12 ಮಾರ್ಚ್‌ನಂದು ಪ್ರಕಟವಾಗಿತ್ತು. ಅನಂತರ ಈ ವಾರ್ತೆಯನ್ನು ಮರಾಠಿ 'ದೈನಿಕ ಸನಾತನ ಪ್ರಭಾತ' ಹಾಗೂ ಹಿಂದೂ ಜನಜಾಗೃತಿ ಸಮಿತಿ ಇವುಗಳ ಸಂಕೇತಸ್ಥಳಗಳಲ್ಲಿ ಪ್ರಕಟಿಸಲಾಯಿತು. ಸಮಿತಿಯ ವತಿಯಿಂದ ಮುಂಬೈ ಹಾಗೂ ಜಯಪೂರದಲ್ಲಿನ ಕಾರ್ಯಾಲಯಗಳಿಗೆ ಹೋಗಿ ಟ್ರಸ್ಟ್‌ನ ಅಧ್ಯಕ್ಷರನ್ನು ಭೇಟಿ ಮಾಡಲಾಯಿತು. ಅದೇ ರೀತಿ ಸಂಗಣಕೀಯ ಪತ್ರ ಮತ್ತು ದೂರವಾಣಿಗಳ ಮೂಲಕ ಬೆಂಗಳೂರು ಮತ್ತು ದಿಲ್ಲಿಯಲ್ಲಿನ ಕಾರ್ಯಾಲಯಗಳಲ್ಲಿ ವಿರೋಧವನ್ನು ನೋಂದಾಯಿಸಲಾಯಿತು. ಅದರೊಂದಿಗೆ ಸಮಿತಿಯ ಸಂಕೇತಸ್ಥಳದ ಮೂಲಕ ಪ್ರತಿಭಟನಾ ಅಭಿಯಾನವನ್ನು ಆರಂಭಿಸಲಾಯಿತು.

ಇದರಿಂದ ಕೆಲವೇ ಗಂಟೆಗಳಲ್ಲಿ ದೇಶವಿದೇಶಗಳಿಂದ ಸಹಸ್ರಾರು ಹಿಂದೂ ಧರ್ಮಾಭಿಮಾನಿಗಳು ಟ್ರಸ್ಟ್‌ಗೆ ಸಂಗಣಕೀಯ ಪತ್ರದ ಮೂಲಕ ತಮ್ಮ ವಿರೋಧವನ್ನು ನೋಂದಾಯಿಸಿದರು. ಮರಾಠಿ 'ದೈನಿಕ ಸನಾತನ ಪ್ರಭಾತ'ದ ವಾಚಕರೂ ಟ್ರಸ್ಟ್‌ನ ಕಾರ್ಯಾಲಯಕ್ಕೆ ದೂರವಾಣಿಗಳ ಮುಖಾಂತರ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಧರ್ಮಾಭಿಮಾನಿ ಹಿಂದೂಗಳ ಇಂತಹ ಸಂಘಟಿತ ಪ್ರಯತ್ನದಿಂದಾಗಿ ಕೊನೆಯಲ್ಲಿ ಭೋರೂಖಾ ಚಾರಿಟೇಬಲ್ ಟ್ರಸ್ಟ್ ಹಿಂದೆಸರಿಯಬೇಕಾಯಿತು ಮತ್ತು ದುಬೈಗೆ ಹೋಗಿ ಹುಸೇನರಿಗೆ ಗೌರವಿಸುವ ಧರ್ಮದ್ರೋಹಿಗಳ ಸಂಚು ವಿಫಲವಾಯಿತು. **(ಹಿಂದೂಗಳು ಪ್ರತಿಯೊಂದು ಧರ್ಮಹಾನಿಯ ವಿರುದ್ಧ ಇದೇ ರೀತಿ ಸಂಘಟಿತವಾಗಿ ಪ್ರಯತ್ನಿಸಿದರೆ ಖಂಡಿತವಾಗಿಯೂ ಧರ್ಮಹಾನಿಯನ್ನು ತಡೆಗಟ್ಟಬಹುದು ! - ಸಂಪಾದಕರು)** ಈ ಮೊದಲೂ ಸಹ ರಾಜ್ಯಪಾಲರಿಂದ, ಬಾಂಬೆ ಆರ್ಟ್ ಸೊಸೈಟಿಯ ವತಿಯಿಂದ 'ರೂಪಧರ 2006' ಎಂಬ ಪ್ರಶಸ್ತಿಯನ್ನು ಹಿಂದೂದ್ವೇಷಿ ಚಿತ್ರಕಾರ ಮ.ಫಿ. ಹುಸೇನರಿಗೆ ನೀಡಲು ನಿರ್ಧರಿಸಲಾಗಿತ್ತು. ಆದರೆ ಸಮಿತಿಯ ತೀವ್ರ ವಿರೋಧದಿಂದಾಗಿ ಪ್ರಶಸ್ತಿ ನೀಡುವುದನ್ನು ರದ್ದುಗೊಳಿಸಲಾಗಿತ್ತು. ಅದರೊಂದಿಗೆ 'ಎಬಿಎನ್ ಎಮ್‌ಬ್ರೋ ಬ್ಯಾಂಕ್' ಮ.ಫಿ. ಹುಸೇನರ ಚಿತ್ರವನ್ನು ಮುದ್ರಿಸಿದ ಕ್ರೆಡಿಟ್ ಕಾರ್ಡನ್ನು ತಯಾರಿಸಿತ್ತು. ಸಮಿತಿಯು ಆ ಕಾರ್ಡನ್ನು ರದ್ದುಪಡಿಸುವಂತೆ ಮಾಡಿತು. ಪ್ರಸಿದ್ಧ 'ಖುಶಿ' ಸಂಘಟನೆಯು ತನ್ನ ಚಿತ್ರಪ್ರದರ್ಶನದಲ್ಲಿ ಮ.ಫಿ. ಹುಸೇನರು ಬಿಡಿಸಿದ ಚಿತ್ರಗಳನ್ನು ಸಮಾವೇಶ ಮಾಡುವುದಿತ್ತು. ಆದರೆ ಸಮಿತಿಯ ವಿರೋಧದಿಂದಾಗಿ ಆ ಪ್ರದರ್ಶನದಲ್ಲಿಯೂ ಹುಸೇನರು ಬಿಡಿಸಿದ ಚಿತ್ರಗಳಿಗೆ ಸ್ಥಾನ ಸಿಗಲಿಲ್ಲ. ಈ ರೀತಿ ಮ.ಫಿ. ಹುಸೇನರ ಬಗ್ಗೆ ಸಮಾಜದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿರುವುದರಿಂದ ಇನ್ನು ಮುಂದೆ ಯಾವುದೇ ಸಂಘಟನೆ ಹಾಗೂ ಸಂಸ್ಥೆಯು ಮ.ಫಿ. ಹುಸೇನರನ್ನು ವೈಭವೀಕರಿಸಬಾರದು ಎಂದು ಸಮಿತಿಯು ಕರೆ ನೀಡಿದೆ.

### ಆಂಧ್ರಪ್ರದೇಶದ ಆದೋನಿಯಲ್ಲಿಯೂ ಇತಿಹಾಸದ ವಿಕೃತೀಕರಣಗೊಳಿಸಿದ 'ಜೋಧಾ-ಅಕ್ಬರ' ಚಲನಚಿತ್ರಕ್ಕೆ ತಡೆ !

ಆಂಧ್ರಪ್ರದೇಶದ ಆದೋನಿಯಲ್ಲಿನ ಹಿಂದೂ ಜನಜಾಗೃತಿ ಸಮಿತಿಯ ಸದಸ್ಯರಾದ ಶ್ರೀ. ದಯಾಕರ, ಶ್ರೀ. ರವಿ ಮತ್ತು ಶ್ರೀ. ರಾಮುರವರು ಇತಿಹಾಸದ ವಿಕೃತೀಕರಣಗೊಳಿಸಿದ, ಹಿಂದೂದ್ವೇಷಿ ಅಕ್ಬರನನ್ನು ಓರ್ವ ಸಜ್ಜನನಂತೆ ವೈಭವೀಕರಿಸಿದ 'ಜೋಧಾ-ಅಕ್ಬರ' ಚಲನಚಿತ್ರದ ಪ್ರದರ್ಶನವನ್ನು ವಿರೋಧಿಸಿದ್ದರಿಂದ ಆ ಚಲನಚಿತ್ರ ಪ್ರದರ್ಶನವನ್ನು ನಿಲ್ಲಿಸಲಾಯಿತು. ದಿನಾಂಕ 19.3.2008 ರಂದು ಸಂಜೆ 7 ಗಂಟೆಗೆ ಹಿಂದೂ ಜನಜಾಗೃತಿ ಸಮಿತಿಯ ಸದಸ್ಯರು ಆದೋನಿಯ 'ಟು ಟೌನ್' ಪೊಲೀಸ್ ಠಾಣೆಗೆ ಹೋಗಿ ಅಲ್ಲಿನ ಉಪಅಧೀಕ್ಷಕರನ್ನು (ಎಸ್.ಐ.) ಭೇಟಿಯಾಗಿ 'ಜೋಧಾ-ಅಕ್ಬರ್' ಚಲನಚಿತ್ರ ಪ್ರದರ್ಶನವನ್ನು ನಿಲ್ಲಿಸುವುದರ ಕುರಿತು ವಿನಂತಿಪತ್ರವನ್ನು ಸಲ್ಲಿಸಿದರು. ಅಲ್ಲದೇ 'ಶಿವ' ಚಲನಚಿತ್ರಗೃಹದ ಮಾಲೀಕರನ್ನು ಭೇಟಿಯಾಗಿ ಅವರಿಗೆ ಈ ಚಲನಚಿತ್ರದಲ್ಲಿರುವ ಇತಿಹಾಸದ ವಿಕೃತೀಕರಣದ ಬಗ್ಗೆ ತಿಳಿಸಿ ಚಲನಚಿತ್ರ ಪ್ರದರ್ಶನವನ್ನು ರದ್ದು ಗೊಳಿಸಬೇಕೆಂದು ಕೇಳಿಕೊಂಡರು. ಇದಕ್ಕೆ ಉಪಅಧೀಕ್ಷಕರು (ಎಸ್.ಐ.) ಒಪ್ಪಿಗೆಯನ್ನು ಕೊಟ್ಟಿದ್ದರು. ಅನಂತರ ಚಲನಚಿತ್ರಗೃಹದ ಮೇಲ್ವಿಚಾರಕರನ್ನು ಭೇಟಿಯಾಗಿ ಈ ಚಲನಚಿತ್ರದಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ ಹೇಳಿದರು. ಮರುದಿನ ಜೋಧಾ-ಅಕ್ಬರ್ ಚಲನಚಿತ್ರವನ್ನು ಬದಲಾಯಿಸಿ ಬೇರೆ ಚಲನಚಿತ್ರವನ್ನು ಹಾಕಿದರು. ಈ ಘಟನೆಯ ವಾರ್ತೆಗೆ ಅಲ್ಲಿನ ಅನೇಕ ವರ್ತಮಾನ ಪತ್ರಿಕೆಗಳು ಪ್ರಕಟಿಸಿ ಪ್ರಸಿದ್ಧಿಯನ್ನು ನೀಡಿದ್ದವು.

**ಕನ್ನಡ ಸಾಪ್ತಾಹಿಕ ಸನಾತನ ಪ್ರಭಾತ ಈಗ ಅಂತರ್ಜಾಲದಲ್ಲಿಯೂ ಲಭ್ಯ**
ಇಂದೇ ಭೇಟಿ ನೀಡಿರಿ !
kannada.sanatan.org